# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 15-03-2021 ಪ್ರಶ್ನೆ ಸಂಖ್ಯೆ : 1017(1344)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಹೆಚ್. ಎಂ. ರಮೇಶ ಗೌಡ(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 15-03-2021

ಉತ್ತರಿಸುವ ಸಚಿವರು: ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ವಿಷಯ : ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿಯಲ್ಲಿರುವ ಬಿ. ಇ. ಓ ಕಛೇರಿಯ ಕುರಿತು

(ಅ) ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ಬಿ.ಇ.ಓ. ಕಛೇರಿಯಲ್ಲಿ ಸಕಾಲ ಸೇವೆಯನ್ನು ಯಾವಾಗಿನಿಂದ ಒದಗಿಸಲಾಗಿದೆ; ಇಲ್ಲಿಯವರೆಗೆ ಸಕಾಲ ಅಡಿಯಲ್ಲಿ ಎಷ್ಟು ಅರ್ಜಿಗಳನ್ನು ಹಾಕಲಾಗಿದೆ; ಎಷ್ಟು ವಿಲೇವಾರಿ ಆಗಿದೆ; (ಪೂರ್ಣ ವಿವರ ಒದಗಿಸುವುದು)

(ಆ) ಕಳೆದ 5 ವರ್ಷಗಳಿಂದ ಚಿಕ್ಕನಾಯಕನಹಳ್ಳಿ ಬಿ.ಇ.ಓ ಕಛೇರಿಯಲ್ಲಿ ಆರ್.ಟಿ.ಇ. ಅಡಿಯಲ್ಲಿ ಪ್ರವೇಶ ಪಡೆದ ಮಕ್ಕಳ ಶಾಲಾವಾರು, ತರಗತಿವಾರು ವಿವರ ನೀಡುವುದು ಆರ್.ಟಿ.ಇ ಶುಲ್ಕ ಮರು ಪಾವತಿ ಸಂಬಂಧ ಬಿ.ಇ.ಓ. ರವರು ಕಳೆದ 3 ವರ್ಷಗಳಿಂದ ನಡೆಸಿದ ಸಭೆಗಳು ಎಷ್ಟು; (ವಿವರ ನೀಡುವುದು)

(ಇ) ಆರ್.ಟಿ.ಇ. ಅಡಿಯಲ್ಲಿ ಪ್ರವೇಶ ಪಡೆದ ಮಕ್ಕಳ ಶುಲ್ಕವನ್ನು ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಪ್ರತಿವರ್ಷ ಪಾವತಿ ಮಾಡಲಾಗಿದೆಯೇ; ಬಾಕಿ ಇದ್ದಲ್ಲಿ ಕಾರಣವೇನು; (ಶಾಲಾವಾರು ವಿವರ ನೀಡುವುದು)

(ಈ) ಚಿಕ್ಕನಾಯಕನಹಳ್ಳಿಯಲ್ಲಿರುವ ಕ್ಷೇತ್ರ ಶಿಕ್ಷಣಾಧಿಕಾರಿ ಇವರ ಕರ್ತವ್ಯ ಲೋಪದ ದೂರಿನ ಮೇಲೆ ಯಾವುದಾದರು ವಿಚಾರಣೆ ನಡೆಸಿದೆಯೇ? (ನಡೆಸಿದ್ದಲ್ಲಿ ಅವರ ಮೇಲೆ ತೆಗೆದುಕೊಂಡ ಕ್ರಮ ಮತ್ತು ವಿಚಾರಣಾ ವರದಿಯನ್ನು ನೀಡುವುದು)